ಮೂರನೆ ನಿರೂಪಣಾ ದೃಷ್ಟಿಯೊಂದು ಸೇರಿಕೊಳ್ಳುತ್ತದೆ. ಇವೆಲ್ಲವುಗಳ ಜೊತೆಗೆ, ಪ್ರೇಕ್ಷಕರ ಒಳಬಾಳಿನ 'ಝಲಕ್'ಗಳು ಕೂಡ ಮಿಂಚಿ ಮಾಯವಾಗುತ್ತವೆ. ಸ್ವತಃ ಲಜಾರ್‌ನ ವೈಯಕ್ತಿಕ ಅನುಭವ–ಅನಿಸಿಕೆ, ಆತ್ಮವಿಶ್ಲೇಷಣೆಯೂ ಕಾದಂಬರಿಯಲ್ಲಿದೆ. ದೊವಾಲೆಯ ಬಾಲ್ಯದ ಬದುಕನ್ನು ಮೂರು ಜೋಡಿ ಕಣ್ಣುಗಳ ಮೂಲಕ ತೋರಿಸುವ ಈ ಕಥನತಂತ್ರ ಹಾಗೂ ನಿರೂಪಣಾ ವಿಧಾನವು ಒಂದಾದ ನಂತರ ಮತ್ತೊಂದು ತೆರೆದುಕೊಳ್ಳುತ್ತ ಭಿನ್ನ ಲೋಕದೃಷ್ಟಿಗಳು ಹೆಣೆದುಕೊಳ್ಳುತ್ತ ಹೋಗುತ್ತವೆ. ಆ ನೋಟಗಳ ನಡುವೆ ಒಂದು ಟೆನ್ಷನ್ ಇದೆ. ಈಗ ನಮಗೆ ಪೋಲಿಯಂತೆ, ಕೋಳಕನಂತೆ, ವಿಫಲನಾಗುತ್ತಿರುವ ಕಾಮೆಡಿಯನ್ನಂತೆ ಕಾಣಿಸಿಕೊಳ್ಳುತ್ತಿರುವ ದೊವಾಲೆಯ ಬಾಲ್ಯದ ಬದುಕಿನ ನರಕ, ಮುಗ್ಧತೆ, ಅವನು ಅನುಭವಿಸಿದ ಹಿಂಸೆ ನಮ್ಮೆದುರಿಗೆ ಬರತೊಡಗುತ್ತದೆ. ಅವನ ತಾಯಿತಂದೆಯರ ದಾಂಪತ್ಯಜೀವನದ ಪ್ರೀತಿ ಮತ್ತು ದ್ವೇಷ, ಬಡತನ ಮತ್ತು ಘನತೆಯ ಪರಿಚಯವೂ ನಮಗಾಗುತ್ತ ಕಾದಂಬರಿಯು ಏಕಕಾಲಕ್ಕೆ ಟ್ರ್ಯಾಜಿಡಿಯೂ, ಕಾಮೆಡಿಯೂ ಆಗಿ ಕಾಣತೊಡಗುತ್ತದೆ.

ಐವತ್ತೇಳು ವರ್ಷ ವಯಸ್ಸಿನ ಕಮೆಡಿಯನ್ ದೊವಾಲೆ ತೆಳ್ಳನೆಯ, ಕುಳ್ಳ ಮನುಷ್ಯ. ಮಾಸಲು ಜೀನ್ಸ್, ಕನ್ನಡಕ ತೊಟ್ಟ ಅವನು ಹಿಂಬದಿಯಿಂದ ಯಾರೋ ಒದ್ದರೇನೋ ಅನ್ನುವ ರೀತಿಯಲ್ಲಿ ಮುಗ್ಗರಿಸುತ್ತ, ಬೀಳುವ ಹೆಜ್ಜೆಯಿಡುತ್ತ ವೇದಿಕೆಯ ಬಲಭಾಗದಿಂದ ವೇದಿಕೆಯ ನಡುವಿಗೆ ಬರುತ್ತಾನೆ. ಅವನನ್ನು ಹಾಗೆ ನೋಡಿದ ಕೂಡಲೆ ಕ್ಲಬ್‌ನಲ್ಲಿ ನಗು, ಚಪ್ಪಾಳೆ ತುಂಬುತ್ತದೆ. ಮುಂದುವರೆದು ಅವನು '...ಮಾನ್ಯರೇ, ಮಹಿಳೆಯರೆ... ನೀವೆಲ್ಲ ಇಲ್ಲಿ ಕೂತ್ಕೊಂಡು ನನ್ನ ಬಗ್ಗೆ ತೀರ್ಮಾನ ಕೊಡೋವ್ರಿದ್ದೀರ? ದೇವರೇ, ಈ ಕ್ಷಣ ನಾನು ನಿಜವಾಗ್ಲೂ ನೆತಾನ್ಯದಲ್ಲಿದ್ದೀನಿ, ನಾನು ರಕ್ಷಣೆಗೆ ಮೆಟಲ್ ಜಾಕೆಟ್ ಕೂಡ ಹಾಕ್ಕೊಂಡಿಲ್ಲ?' ಎನ್ನುತ್ತ ಕಿಬ್ಬೊಟ್ಟೆಯ ಮೇಲೆ ಕೈಯನ್ನು ಕತ್ತರಿಯಂತೆ ಇಟ್ಟುಕೊಳ್ಳುತ್ತಾನೆ. ನೆರೆದ ಪ್ರೇಕ್ಷಕರು ಖುಷಿಯಿಂದ ಕಿರುಚತೊಡಗುತ್ತಾರೆ. ಇಸ್ರೇಲ್‌ನಂತಹ ದೇಶದಲ್ಲಿ ಮೆಟಲ್ ಜಾಕೆಟ್‌ನ ಅಗತ್ಯ ಯಾವ ಬಗೆಯದ್ದು ಎಂಬುದು ಅಲ್ಲಿನ ರಾಜಕೀಯ ಸ್ಥಿತಿಯ ಬಗ್ಗೆ ಬಲ್ಲ ಯಾರಾದರೂ ಊಹಿಸಬಹುದು. ಆತಂಕಗೊಳ್ಳಬೇಕಾದ್ದಕ್ಕೆ ಸಂಭ್ರಮಿಸುವ, ನೋವು ಮತ್ತು ನಾಚಿಕೆಯಿಂದ ಕುಗ್ಗಿ ಮೌನವಾಗಬೇಕಾದ್ದಕ್ಕೆ ಎಗ್ಗಿಲ್ಲದೆ ಮಾತನಾಡುವ, ಆತ್ಮಾವಲೋಕನ ಮಾಡಿಕೊಳ್ಳುವ ಬದಲು ಆತ್ಮರತಿಯಲ್ಲಿ ಮುಳುಗಿಹೋಗುವ ವಿದ್ಯಮಾನಗಳು ಜಗತ್ತಿನೆಲ್ಲೆಡೆ ಜರುಗುತ್ತಿದೆ ಎಂಬುದಕ್ಕೆ ಒಡ್ಡಿದ ಸಂಕೇತದಂತೆ ಮೇಲಿನ ಭಾಗ ಕಾಣುತ್ತದೆ. ಆದರೆ ಇದನ್ನು ನೋಡುತ್ತಿರುವ ಲಜಾರ್‌ಗೆ ಒಳಗೊಳಗೇ ನೋಯುತ್ತಿರುವ ದೊವಾಲೆಯ ಆರ್ದ್ರ ಕಣ್ಣುಗಳು ಮತ್ತು ಆತಂಕಭರಿತ ಅಂತರಂಗ ಕಾಣುತ್ತದೆ.

ನಡುವಯಸ್ಕ ದೊವಾಲೆಯು ಹೇಳುವ ವೃತ್ತಾಂತದೊಳಗೆ ಒಂದು ಕುತೂಹಲಕಾರಿ ಸಂಗತಿಯಿದೆ: ಬಾಲಕ ದೊವಾಲೆಗೆ ಚಿಕ್ಕಂದಿನಿಂದ ಆಗಾಗ ತಲೆಕೆಳಗಾಗಿ ಕೈಯ ಮೇಲೆ ನಡೆಯುವ ಅಭ್ಯಾಸ. ಒಬ್ಬ ಚಿಕ್ಕ ಹುಡುಗನ ಹುಡುಗಾಟಿಕೆಯ ಕೆಲಸವಾಗಿ ನಮಗೆ ಇದು ಕಾಣಬಹುದು. ದೊವಾಲೆ ಇದನ್ನು ಹೇಳುವಾಗ ಪ್ರೇಕ್ಷಕ ಲಜಾರ್‌ಗೆ ಅದು ಗುರುತ್ವಾಕರ್ಷಣ ನಿಯಮಕ್ಕೆ ವಿರುದ್ಧವಾದದ್ದು ಅನ್ನಿಸುತ್ತದೆ. ಇವೆಲ್ಲದರಾಚೆ ನಮಗೆ ಲೋಕವನ್ನು ಹೀಗೂ ನೋಡಬಹುದು ಅಂತಲೂ ಅನ್ನಿಸಬಹುದು. ತನ್ನ ಈ ಕಾದಂಬರಿಗೆ ಪ್ರಶಸ್ತಿ ಬಂದಾಗ ಕಾದಂಬರಿಕಾರ ಗ್ರಾಸ್‌ಮನ್ ಸಂದರ್ಶನವೊಂದರಲ್ಲಿ, "You have to act against the